ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :–

ಅ) ಹೌದು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತದ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ದೃಷ್ಟಿಯಿಂದ ಪಾಲಿಕೆಯನ್ನು ವಿಭಜಿಸಲು ನಿರ್ಧರಿಸಲಾಗಿರುತ್ತದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜಿಸಲು ಸರ್ಕಾರವು ದಿನಾಂಕ : 22–09–2014ರ ಆದೇಶದಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಗೆ ವಿಭಜನೆ ಮಾಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಅಧ್ಯಯನ ಮಾಡಿ ವರದಿಯನ್ನು 3 ತಿಂಗಳೊಳಗಾಗಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಪಾಲಿಕೆಯನ್ನು ಎಷ್ಟು ಭಾಗವಾಗಿ ವಿಂಗಡಿಸಬೇಕೆಂಬುದರ ಬಗ್ಗೆ ಸಮಿತಿಯು ನೀಡುವ ವರದಿಯ ನಂತರ ಪರಿಶೀಲಿಸಲಾಗುವುದು.

ಇ) ವಿಭಜನೆಯಿಂದಾಗುವ ಸಾಧಕ–ಬಾಧಕಗಳನ್ನು ಸಮಿತಿಯು ಅಧ್ಯಯನ ಮಾಡುತ್ತದೆ.

ಕ್ರಿಯಾ ಯೋಜನೆ

1120 (869) ಶ್ರೀ ಅಶೋಕ್ ಆರ್. (ಪದ್ಮನಾಭ ನಗರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬೆಂಗಳೂರು ಮಹಾನಗರ ಅಭಿವೃದ್ಧಿಗೆ ಸಂಬಂಧಪಟ್ಟ 2015ರ ಪರಿಷ್ಕೃತ ಕ್ರಿಯಾ ಯೋಜನೆ ಪ್ರಕ್ರಿಯೆಯು ಪ್ರಗತಿಯಲ್ಲಿದೆಯೇ/ಪ್ರಸ್ತುತ ಯಾವ ಹಂತದಲ್ಲಿದೆ;

ಆ) ಇದಕ್ಕೆ ಅಗತ್ಯ ತಿದ್ದುಪಡಿಗಳನ್ನು ಸರ್ಕಾರ ಸೂಚಿಸಿದೆಯೇ; ತಿದ್ದುಪಡಿಯಾದ್ದಾಗ್ಯೂ ವಿಳಂಬಕ್ಕೆ ಕಾರಣಗಳೇನು;

ಇ) ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿರುವ ಪ್ರಮುಖ ಅಂಶಗಳಾವುವು ; ನಗರದ ಭವಿಷ್ಯದ ಅಭಿವೃದ್ಧಿ ದೃಷ್ಟಿಯಿಂದ ಅಂದಾಜು 20–25 ವರ್ಷಗಳ ಮುನ್ನೋಟ ಪ್ರಗತಿ ಯೋಜನೆಗಳನ್ನು ರೂಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಈ) ಈ ಮಾಸ್ಟರ್ ಪ್ಲಾನ್‌ನಲ್ಲಿ ರೂಪಿಸಿರುವ ವಲಯಗಳವಾರು ಸಲಹೆ ಅಭಿಪ್ರಾಯದ ಆಧಾರದಲ್ಲಿ ಯೋಜಿಸಲಾಗಿದೆಯೇ ; (ವಿವರಗಳನ್ನು ಒದಗಿಸುವುದು)

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :–

ಅ) ಬೆಂಗಳೂರು ಮಹಾನಗರ ಅಭಿವೃದ್ಧಿಗೆ ಸಂಬಂಧಪಟ್ಟ 2015ರ ಪರಿಷ್ಕೃತ ಕ್ರಿಯಾ ಯೋಜನೆ ಪ್ರಕ್ರಿಯೆ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ RMP-2031 ತಯಾರಿಕೆ ಕಾರ್ಯವು

ಚಾಲನೆಯಾಗಿದ್ದು, ಪ್ರಸ್ತುತ Data Collection ಮತ್ತು ಬೇಸ್ ಮ್ಯಾಪ್ ಅನ್ನು ತಯಾರಿಸುವ ಕಾರ್ಯ ನಡೆಯುತ್ತಿದೆ ಜೊತೆಗೆ ಇತರೆ ಕೆಲಸಗಳು ಪ್ರಗತಿಯಲ್ಲಿದೆ. ನಂತರ Existing Land use map ಅನ್ನು ತಯಾರಿಸಲಾಗುವುದು. ಹಾಲಿ ಚಾಲ್ತಿಯಲ್ಲಿರುವ RMP-2015 ರ ಅವಧಿಯು 2015 ಅಂತ್ಯದವರೆವಿಗೂ ಇರುತ್ತದೆ. RMP-2015 ರ ವಲಯ ನಿಯಮಾವಳಿ ಗೆ ಸಂಬಂಧಿಸಿದಂತೆ ವಸತಿ ವಲಯಗಳಿಂದ ವಾಣಿಜ್ಯ ವಲಯಕ್ಕೆ ಅವಕಾಶ ಕಲ್ಪಿಸಿರುವುದನ್ನು ಬೆಂಗಳೂರು Citizen Action form ಮತ್ತು ಇನ್ನಿತರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ W.P. 3676/2008 & 43472-74/2011 ಪ್ರಶ್ನಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ 19.02.2014 ರಲ್ಲಿ ತನ್ನ ಆದೇಶದಲ್ಲಿ ಕೆಲವೊಂದು ತಿದ್ದುಪಡಿ ಮಾಡುವಂತೆ ಸೂಚಿಸಿರುತ್ತದೆ. ಅದರಂತೆ ಕೆ.ಟಿ.ಸಿ.ಪಿ. ಕಾಯ್ದೆ 1961 ಕಲಂ 13 (ಇ) ರಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಪ್ರಸ್ತಾವನೆಯ ಸಂಬಂಧ ಅಂತಿಮ ಅಧಿಸೂಚನೆ ಹೊರಡಿಸುವ ಹಂತದಲ್ಲಿರುತ್ತದೆ.

ಆ) ಸರ್ಕಾರವು ನ್ಯಾಯಾಲಯದಲ್ಲಿ ಆದೇಶದಂತೆ RMP-2015 ರ ವಲಯ ನಿಯಮಾವಳಿ ಕೆಲವೊಂದು ಕಲಂಗಳಿಗೆ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದ್ದು, ಈ ತಿದ್ದುಪಡಿಗಳ ಕರಡು ಅಧಿಸೂಚನೆಯನ್ನು ದಿನಾಂಕ 14.10.2014 ರಂದು ಹೊರಡಿಸಲಾಗಿದ್ದು, ಅಂತಿಮ ಅಧಿಸೂಚನೆ ಆಗಬೇಕಾಗಿದ್ದು, ಸಾರ್ವಜನಿಕರಿಂದ ಈ ಸಂಬಂಧ ಸಲಹೆ/ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಬಂದಿರುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ತಿದ್ದುಪಡಿಗಳೊಂದಿಗೆ ಅಂತಿಮ ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ.

ಇ) ಅಭಿವೃದ್ಧಿಯ ದೃಷ್ಟಿಯಿಂದ ಈಗ ಪರಿಷ್ಕರಿಸುತ್ತಿರುವ ಮಹಾಯೋಜನೆಯಲ್ಲಿ ಮುಂದಿನ 16 ವರ್ಷಗಳಲ್ಲಿನ ಅಂದರೆ RMP-2031 ರ ಮಹಾಯೋಜನೆ ತಯಾರಿಸಲಾಗುತ್ತಿದೆ.

ಪರಿಷ್ಕೃತ ಯೋಜನೆ RMP-2031 ರಲ್ಲಿ ಮುನ್ನೋಟ ಪ್ರಗತಿ ಯೋಜನೆಗಳನ್ನು ರೂಪಿಸಿ ಅಳವಡಿಸಲು ಪ್ರಯತ್ನಿಸಲಾಗುತ್ತಿದೆ.

ಈ) RMP-2031 ರ ಯೋಜನೆ ತಯಾರಿಕೆ ಕಾರ್ಯವು ಪ್ರಗತಿಯಲ್ಲಿದ್ದು, ಪ್ರಾರಂಭಿಕ ಹಂತದಲ್ಲಿದ್ದು, ಮುಂದಿನ ದಿನಗಳಲ್ಲಿ ಸಲಹೆ ಸೂಚನೆ ಮತ್ತು ಅಭಿಪ್ರಾಯಗಳನ್ನು ಸಾರ್ವಜನಿಕರಿಂದ ಪಡೆದು ಯೋಜನೆಯನ್ನು ರೂಪಿಸಲಾಗುವುದು.